102 (2)

ಗೋರಕ್ಷಣಿ
GORAKSHANA

೧ ನೇ ವರ್ಷ 1962 ನೇ ಫೆಬ್ರವರಿ ತಾ|| 27 Feb 62

Help ' The Gorakshana '

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

Advertise in Goraksana and help the pious cause

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಭಾರತ ಮತ್ತು ಗೋ-ಮಾತೆ

★

ಭಾರತದಲ್ಲಿ ಜನಿಸಿದ ಪ್ರತಿ ವ್ಯಕ್ತಿಗೂ (ಮುಖ್ಯವಾಗಿ ಹಿಂದೂವಿಗೆ) ಮಾತೆಯುವರು ಮೂರು ಜನ .. ಜನ್ಮಕೊಟ್ಟವಳು, ಹೊರುವ ಭೂಮಾತೆ, ಹಾಗೂ ಸಲುಹುವ ಗೋಮಾತೆ; ಜನ್ಮದಾತೆಯು ನವಮಾಸಗಳಲ್ಲಿ ಶಿಶುವನ್ನು ಗರ್ಭದಲ್ಲಿ ಧರಿಸಿ ಕಾಪಾಡುವವಳಾದರೆ, ನಮ್ಮ ಪ್ರಾಣಾಂತದವರೆಗೂ ನಾವಾಡುವ ವಿಶಾಲ ಮಡಿಲಿನ ತಾಯಿ ಭಾರತಮಾತೆಯಾಗಿದ್ದಾಳೆ; ಹೆತ್ತ ತಾಯಿಯು ತೊಡೆ ಬೆ ಮೇಲೆ ಕೂರಿಸಿ, ಮಲಗಿಸಿ, ಆಟವಾಡಿಸಿ ನಮಗೆ ನಿರ್ದಿಷ್ಟ ಆಪ ಧಿಯಿದೆ; ಆದರೆ ಈ ಮಹಾಮಾತೆ-ಭೂಮಾತೆಯು ಮೇಲೆ ಸದಾ ಕುಣಿದು ಕುಪ್ಪಳಿಸಿ, ಉರಿಳಾಡುತ್ತೇವೆ; ಇನ್ನು ಈ ನಮ್ಮ ಸುದೀರ್ಘ ಜೀವನ ಕಾಲದಲ್ಲಿ, ನಮ್ಮ ದೇಹಕ್ಕೆ ಪುಷ್ಟಿಕೊಡುವ, ಪೌಷ್ಟಿಕ ಶಕ್ತಿಯನ್ನು ತೀವ್ರಗೊಳಿಸುವ, ಅಮೃತಸದೃಶ ಕ್ಷೀರವನ್ನೀಯುವ ನಾಕಾರತಾಯಿ ಗೋಮಾತೆಯಾಗಿದ್ದಾಳೆ.

ಅನಾದಿ ಕಾಲದಿಂದ ಕೋಟಿಕೋಟಿ ಮಾತೃವಿಹೀನ ಹಸುಳೆಗಳನ್ನು ಗೋಮಾತೆ ಅಮೃತದಿಂದ ಪೋಷಿಸುತ್ತಾ ಬಂದಿದ್ದಾಳೆ; ತಾಯಿಯಾದವಳು ತನ್ನ ತನ್ನ ಮಕ್ಕಳೆಲ್ಲಾ ತಿಂದು ಉಂಡು ಸಂತೋಷಪಟ್ಟು ಉಳಿದದ್ದನ್ನ ತಾನು ತಿಂದು ಆನಂದಿಸುವಂತೆ ಯಾರಿಗೂ ಬೇಡವಾದ, ಉಪಯೋಗಿಸಲ್ಪಟ್ಟು ಉಳಿದ ಹುಲ್ಲು ಸೊಪ್ಪುಗಳನ್ನು ತಿಂದು ಇತ್ಯಾದಿಗಳನ್ನು ತಿಂದು ಸವಿಯಾದ ಹಾಲನ್ನು ಎಲ್ಲರಿಗೂ ಉಣಿಸುವ ವಾತ್ಸಲ್ಯಮಯೀ ತಾಯಿಯೆಂದರೆ ಗೋಮಾತೆ; ಮತ್ತು ತಾಯಿಯಾದವಳು ತನ್ನ ಮಕ್ಕಳಲ್ಲಿ ಒಳ್ಳೆಯವರಿಂಲಿ, ಕೆಟ್ಟವರಿಂಲಿ, ಜಾಣರಿಂಲಿ, ದಡ್ಡರಿಂಲಿ ಯಾಂಬಗ್ಗೆಯೂ ತನ್ನ ಮೆಯ ತೆಯಲ್ಲಿ ವೆತ್ಯಾಸತೋರಲಾಂಳಲ್ಲವೇ ? ಅಂತೆಯೇ ತನ್ನನ್ನು ಪ್ರತಿದಿನ ಸೇವಿಸುವವರಿಗೂ, ಹಾಗೇ ಕೊಲೆಗೈಯ್ಯುವವರಿಗೂ ಅದೇ ಸವಿಯಾದ ಹಾಲನ್ನು ಇತ್ತು ಕಾಪಾಡುವಳು ಈ ತಾಯಿ, ತನ್ನ ಸ್ವಂತ ಕಂದನಿಗ ಬಗ್ಗೆ ಎಷ್ಟು ಮಮತೆಯೋ ಅಷ್ಟೇ ಪ್ರೀತಿಯಿಂದ ತನ್ನನ್ನು ನಾಕಿದ ಮನೆಯ ಮಕ್ಕಳನ್ನು ಈ ತಾಯಿ ಪ್ರೀತಿಸುತ್ತಾಳೆ ದೀದಿಯಲ್ಲಿ ಮಕ್ಕಳು ಅಡು ತ್ತಿದ್ದರೆ ಅವರಿಗೆ ತೊಂದರೆಯಾಗದಂತೆ ಪಕ್ಕದಿಂದ ಹಸು ಹೋಗುವುದನ್ನು ನಾವು ನೋಡಿರಬಹುದು.

ತನ್ನಲ್ಲಿರುವುದನ್ನೆಲ್ಲಾ ಮಕ್ಕಳ ಸುಖಸಂತೋಷಕ್ಕಾಗಿ ಉಪಯೋಗಿಸುವುದು ತಾಯಿಯಂದಂ ಸಹಜಸ್ವಭಾವ; ಇದನ್ನು ನಾವು ನಮ್ಮ ನಿತ್ಯ ಜೀವನದಲ್ಲಿ ಕಾಣುತ್ತೇವೆ: ಗೋಮಾತೆಯುದೇನೂ ಕಡಮೆ ಇಲ್ಲ; ಧೂಶುದ್ಧಿಗಾಗುವಂತೆ ಮೂಲಮೂತ್ರ, ಜೀವನ ನಿರ್ವಹಣೆಗಾಗಿ ಚಕ್ಕಡಿಗುಯಿನಿಂದ ಮುದುಕರವರೆಗೆ, ಒಬ್ಬ ರೋಗಿಯಿಂದ ಹಿಡಿದು ಪುಷ್ಟಿಪ್ಪ ದೇಹಿಯವರೆಗೆ ಎಲ್ಲರಿಗೂ ಬೇಕೆನಿಸುವ ಹಾಲು ಮೊಸರು ತುಪ್ಪ ಇತ್ಯಾದಿಗಳನ್ನು ಒದಗಿಸುವಳು; ಇದಲ್ಲದೆ ಈ ಗೋವಿನಿಂದ ನಮ್ಮ ಜೀವನಾಧಾರವಾದ ಧಾನ್ಯದ ಉತ್ಪತ್ತಿಗೆ ಅವಶ್ಯವಾದ ಗೊಬ್ಬರ ಮತ್ತು ಹೋರಗಳು ನಮಗೆ ಸಿಕ್ಕುವುವು; ಈ ರೀತಿ ಅಜೀವ ಪರ್ಯಂತ ಮಾನವರನ್ನು ಪೋಷಿಸುವ ಕಾರ್ಯವಯೀ, ತ್ಯಾಗಿ ಜೀವನ ಗೋಮಾತೆಯದಾಗಿದೆ.

ಮೇಲಾಗಿ ಭಾರತೀಯರು ನಂಬಿರುವಂತೆ ಇಹ ಜೀವನದ ಸಂಕರ ನವಿಾ ಅತ್ಯಪನ್ನು ವೈತರಣೀ ನದಿಯಿಂದ ಪಾರುಗೊಳಿಸುವ ಸಾಧನಕೂಡ ಗೋಮಾತೆಯೇ ಆಗಿದ್ದಾಳೆ: ಆದಕ್ಕಾಗಿಯೇ ಗೋವನ್ನು ಎಲ್ಲ ದೇವತೆಗಳ ಸ್ವರೂಪವೆಂದು ಪೂಜಿಸುತ್ತೇವೆ. ಈ ರೀತಿ ಮಾನವನ ಅಭ್ಯುದಯ ಹಾಗೂ ನಿಶ್ರೇಯಸ್ಸಿಗೆ ಗಳಿಗೆ ಕಾರಣಳಾದ ಗೋಮಾತೆಯನ್ನೂ ಗೋವಂಶವನ್ನೂ ನಾಶವಾಗದಂತೆ ಜಗನ್ಮಾತೆಯ ಸ್ವರೂಪದಲ್ಲಿ ನೋಡಬೇಕಾದದ್ದು ಹಾಗೂ ಸೇವಿಸಬೇಕಾದುದು ನಮ್ಮ ಕರ್ತವ್ಯವೇ ಆಗಿದೆ.

ಆದರೆ, ಇಂದು..... ?

[ಧರ್ಮಬೋಧ] [ಸಂಕ್ಷಿಪ್ತ]

ಗೋವುಗಳ ಸಗಣಿಯಿಂದ ಗ್ಯಾಸ್ ತಯಾರಿಕೆ

★

ಗೋವುಗಳ ಸಗಣಿಯನ್ನು ಗ್ಯಾಸು ತಯಾರಿಸುವ ಸಲುವಾಗಿ ಉಪಯೋಗಿಸುವ ಸಾಧನಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಕ್ಕೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿದೆ: ಇಂತಹ ಸಾಧನಗಳ ಬೆಲೆ 500 ರೂಗಳಾಗುತ್ತವೆ; ಒಂದು ಗುಂಡಿಯಲ್ಲಿ ಶೇಖರಿಸಲಾಗುವ ಸಗಣಿಯನ್ನು ಕಬ್ಬಣದ ಡ್ರಂ ಸಹಾಯದಿಂದ ಮುಚ್ಚಿ ವಿಥೇಕ ಎಂಬ ಅನಿಲವನ್ನು ಸಂಗ್ರಹಿಸಲಾಗುತ್ತದೆ; ಈ ಅನಿಲವು ಉಂಡುವಳಾಗಿ ತುಂಬಾ ಉಪಯೋಗಕ್ಕೆ ಬರುತ್ತದೆ; 4-5 ಗೋವುಗಳಿದ್ದರೆ ಸಾಕು 80-100 ಪೌಂಡುಗಳಷ್ಟು ಸಗಣಿ ಸಂಗ್ರಹವಾಗುತ್ತದೆ: ಇಷ್ಟು ಪ್ರಮಾಣದ ಸಗಣಿಯಿಂದ ಅರು ಜನರಿಂವ ಒಂದು ಸಂಸಾರಕ್ಕೆ ದಿನಕ್ಕೆ ಬೇಕಾಗುವಷ್ಟು ಉಂಡುಲು ಮತ್ತು ಬೆಳಕನ್ನು ಒದಗಿಸಬಹುದು: ಸಧ್ಯಕ್ಕೆ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ಇಂತಹ 10 ಗ್ಯಾಸು ತಯಾರಿಕಾ ಸಾಧನಗಳನ್ನು ಅಭಿವೃದ್ಧಿ ಬ್ಲಾಕುಗಳಿಗೆ ಸೇರಿದ 19 ಗ್ರಾಮಗಳಲ್ಲಿ ಸ್ಥಾಪಿಸಿದೆ: ಈ ಸ್ಥಳಗಳಿಗೆ ಭೇಟಿ ಕೊಟ್ಟ ಯೋಜನಾಲಯೋಗದ ಸದಸ್ಯ ಶ್ರೀವಾಜ್ ನಾರಾಯಣರವರು ಈ ಉರುವಲು ಸಾಧನಗಳು ತುಂಬಾ ಯಶಸ್ವಿಯಾಗಿ ಕೆಲಸಮಾಡುತ್ತಿರುವುದನ್ನು ಕಂಡು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ: ಉತ್ತರ ಪ್ರದೇಶದ ಇಟಾವಾ ಬ್ಲಾಕು ಪ್ರದೇಶದಲ್ಲಿ ಕೆಲಸಮಾಡುತ್ತಿರುವ ಒಂದು ' ಗ್ಯಾಸ್ ಪ್ಲಾಂಟು ' ಹಿಟ್ಟನ ಗಿರಣಿ ನಡೆಸಲು ಬೇಕಾಗುವಷ್ಟು ಅನಿಲವನ್ನು ಒದಗಿಸುತ್ತಿದೆ.

ಮಥುರಾದಲ್ಲಿ ಪಶು ಮತ್ತು ಕುಕ್ಕಟ ಪ್ರದರ್ಶನ

ಅಖಿಲಭಾರತ ಪಶು ಮತ್ತು ಕುಕ್ಕಟ ಪ್ರದರ್ಶನವು ಮಥುರಾದಲ್ಲಿ 1962 ರ ಮಾರ್ಚ್ 10 ರಿಂದ 17 ರವರೆಗೆ ನಡೆಯುವುದು ; ರಾಷ್ಟ್ರೀಯ ಪಶು ಪ್ರಾಣಿ ಸಂಪತ್ತು ಸಮಿತಿಯು ಈ ಪ್ರದರ್ಶನವನ್ನು ಏರ್ಪಡಿಸಿದೆ ; ಉತ್ತಮ ಪಶುಪ್ರಾಣಿಗಳ ಪೋಷಕರಿಗೆ ಅನೇಕ ಬಹುಮಾನಗಳನ್ನು ಈ ಪ್ರದರ್ಶನದಲ್ಲಿ ನೀಡಲಾಗುವುದು.

ಮುಂದಿನ ಮಹಾ ಚುನಾವಣೆ ವೇಳೆಗೆ ಗೋವಧೆ ಪೂರ್ಣ ನಿರೋಧವಾಗಲಿ

ಜಿಂಕೆ ಪವಿತ್ರವಾದುದು

ಜೋಧಪುರ— ಹಿಂದಿನ ಮಂಗಳವಾರ ಒಬ್ಬ ಪೋಲೀಸು ಇನ್ಸ್‌ಪೆಕ್ಟರು ಬಿಷ್ಣೋಯಿ ಜಾತಿಯವರು ವಾಸಿಸುವ ಒಂದು ಗ್ರಾಮಕ್ಕೆ ಸಿಕಾರಿಗೆ ಹೋಗಿ ಒಂದು ಜಿಂಕೆಯನ್ನು ತಂದನು : ಆ ಜನಕ್ಕೆ ಜಿಂಕೆಯು ಹಸುವಿಗಿಂತಲೂ ಪವಿತ್ರ : ಅದಕ್ಕಾಗಿ ಆ ಜನರು ಇನ್ಸ್‌ಪೆಕ್ಟರನ್ನು ಹೊಡೆದು ಹಾಕುವುದರಲ್ಲಿದ್ದರು ; ಅಷ್ಟರಲ್ಲಿ ಚುನಾವಣೆಗಾಗಿ ಬರುತ್ತಿದ್ದ ಜನರು ಪರಿಸ್ಥಿತಿಯನ್ನು ಶಾಂತವಾಗಿಸಿದರು.

ಪಶುಗಳ ಒಂದು ವಿಚಿತ್ರ ವ್ಯಾಧಿ ಮತ್ತು ನಿವಾರಣೋಪಾಯಗಳು

★

ರೈತಸೋದರರಲ್ಲಿ ಕೆಲವರು ಪಶುಗಳ ವಿಷಯದಲ್ಲಿ ಬಹಳ ಅಶ್ರದ್ಧೆಯಿಂದಿರುತ್ತಾರೆ : ಪಶುಗಳು ಇಡೀ ದಿನಗಲು ಹೊಲದಲ್ಲಿ ಕೆಲಸಮಾಡಿ, ಕಾಲುಗಳು ನೀರಸವಾಗಿ, ಹಸಿವಿನ ಬಾಧೆಯು ಹೆಚ್ಚಾಗಿ ರೈತನ ಗೃಹಕ್ಕೆ ಬಂದು ಸೇರಿಕೊಳ್ಳುತ್ತವೆ ; ಆಗ ಅವುಗಳ ಯಜಮಾನನು ತಕ್ಕ ಜಾಗ್ರತೆಯನ್ನು ವಹಿಸದೆ ಅವುಗಳ ಕೆಲಸವನ್ನು ನೋಡಿಕೊಳ್ಳಲು ತನ್ನ ಕೆಲಸಗಾರನಿಗೇ ಆಜ್ಞೆಮಾಡುತ್ತಾನೆ : ಆ ಪಶುಗಳೊಂದಿಗೆ ಹಗಲೆಲ್ಲ ದುಡಿದ ಕೆಲಸಗಾರನೂ ನೀರಸನಾಗಿ ಹಸಿವಿನಿಂದ ಕೂಡಿರುತ್ತಾನಾದ್ದರಿಂದ ಬೇಸರಗೊಂಡವನಾಗಿ ಯಾವುದೋ ಹಳೇ ಹುಲ್ಲನ್ನು ಅವುಗಳ ಮುಂದೆ ಎಸೆದು ತನ್ನ ವಸತಿಗೆ ಹೊರಟುಹೋಗುತ್ತಾನೆ : ಈ ಕಾರಣದಿಂದ ಹಗಲೆಲ್ಲಾ ದುಡಿದು ಬೆಂಡಾಗಿ ಬಾಡಿದ ಬಾಯಿಯಿಲ್ಲದ ಪಶುಗಳು ತಮಗೆ ಸಾಕಾದಷ್ಟು ಆಹಾರವು ದೊರೆಯದೆ ದೀನತೆಯೊಂದಿಗೆ ಶುಷ್ಕಿಸಿ ಅನೇಕ ವ್ಯಾಧಿಗಳಿಗೆ ಶೀಘ್ರಾಗತ್ಯವೆ : ತನ್ನ ಪಶುಗಳು ಆರೋಗ್ಯದಿಂದಿರುವವೇ ಇಲ್ಲವೇ ಎಂಬ ವಿಷಯದಲ್ಲಿ ಯಜಮಾನನ ಗಮನವೇ ಇರುವುದಿಲ್ಲ ; ಅಂಥಾ ಸಮಯದಲ್ಲಿ ಅವಕ್ಕೆ ಯಾವುದಾದ ಊ ವಿಷ ಜಾಡ್ಯವು ಸಂಭವಿಸಿ ಆಕಸ್ಮಿಕವಾಗಿ ಸಕ್ತುಹೋಗುವುದೂ ಉಂಟು ; ಆದ್ದರಿಂದ ರೈತರು ಪಶು ಪೋಷಣೆ, ಪಶು ವೈದ್ಯಗಳ ಮಾಹಿತಿಯನ್ನುಳ್ಳವರಾಗಿರಬೇಕಾದದ್ದು ಅತ್ಯವಶ್ಯಕವು.

ತರೀ ಜವಿಷಸಂಗಳಿಯವ ಗಾಳಿಮಗಳಲ್ಲಿ ಭತ್ತವನ್ನು ನಾಟಿ ಹಾಕುವ ಸಮಯದಲ್ಲಿ ಈ ವ್ಯಾಧಿಯು ಹೆಚ್ಚಾಗಿ ಹುಡುಕುತ್ತದೆ. ಕಾಲವೆಗಳಲ್ಲಿ ಹೊಸ ನೀರು ಬರುತ್ತಿರಲೂ ಜನರು ಆ ನೀರನ್ನು ಕಡಿದು ಕಾಲರಾ ಮೊದಲಾದ ವ್ಯಾಧಿಗಳಂದ ಪೀಡಿತರಾಗುವಂತೆ, ತರೀಜವಿಷಾನು ಸಾಗುವಳಿಯು ಪ್ರಾರಂಭವಾಗುವಾಗಲೇ ಪಶುಗಳಿಗೆ ಕೂಡ ವಿಷಸಂಶ್ಲೇಷವು ಪ್ರಾಪ್ತವಾಗುವ ಸಂಭವವಿದೆ ಜವಿಷಾನಿನ ವೀರ್ಯವು ಮಳೆಯ ಬೀಳತ್ತಲೂ ಹುಲ್ಲು ಚೆನ್ನಾಗಿ ಬೆಳೆಯಲಾರಂಭಿಸುತ್ತದೆ ; ಪುನಃ ಅರಂಭವಾಗುತ್ತಲೂ ರೈತರು ತಮ್ಮ ಜವಿಷಾನುಗಳನ್ನು ಉತ್ತು, ಹದಮಾಡಿ, ನೀರನ್ನು ಕಟ್ಟಿ ಭತ್ತದ ನಾರು ಬೆಳೆಸುವರು : ಆ ನಾರನ್ನು ನಾಟಿ ಹಾಕುವುದಕ್ಕೆ ಮುಂಚೆ ನೀರು ತುಂಬಿಕೊಂಡಿರುವ ತರೀಜವಿಷಾನನ್ನು ಎತ್ತುಗಳಿಂದ ಉಳಿಸುವರು ; ಅಂಥಾ ಸಮಯದಲ್ಲಿ ಈ ವ್ಯಾಧಿಯನ್ನು ಉಂಟುಮಾಡುವ ಸೂಕ್ಷ್ಮ ಜೀವಿಗಳು ಕೆಸರಾಗಿರುವ ಜವಿಷಾನಿನಲ್ಲಿ ಸೇರಿಕೊಂಡಿರುತ್ತವೆ ; ತಗ್ಗಾಗಿರುವ ಸ್ಥಳದಲ್ಲಿಯು ಹುಲ್ಲಿನ ಬೇರುಗಳನ್ನು ಈ ಸೂಕ್ಷ್ಮ ಜೀವಿಗಳು ಆಕ್ರಮಿಸಿಕೊಂಡು ಪಶುಗಳು ಹುಲ್ಲನ್ನು ತಿನ್ನುವಾಗ ಆ ಹುಲ್ಲಿನೊಂದಿಗೆ ಪಶುವಿನ ದೇಹವನ್ನು ಪ್ರವೇಶಿಸುತ್ತವೆ ; ಆಗ ಆಕಸ್ಮಿಕವಾಗಿ ಈ ರೋಗವು ಸಂಭವಿಸುತ್ತದೆ.

ಈ ಸೂಕ್ಷ್ಮ ಜೀವಿಗಳು ಪ್ರಾಣವಾಯುವಿಲ್ಲದಿರುವ ಸ್ಥಳದಲ್ಲಿ ಜೀವಿಸಿಕೊಂಡಿರಲಾರವು ; ಈ ಸೂಕ್ಷ್ಮ ಜೀವಿಗಳ ಮೊಟ್ಟೆಗಳನ್ನು ಸೀಲುಮಾಡಿ ಕೂಳವಿಯಲ್ಲಿಟ್ಟ ಕಾಪಾಡಿಲು 22 ವರ್ಷಗಳವರೆಗೂ ಜೀವಿಸಿಕೊಂಡಿದ್ದವೆಂದು ಲೂಯಿ ಫಾಶ್ಚರ್ ಹೇಳಿದ್ದಾರೆ ಈ ವ್ಯಾಧಿಯು ತಗಲಿದ ಪಶುವಿನ ರಕ್ತದಲ್ಲಿ ಸೂಕ್ಷ್ಮ ಜೀವಿಗಳು ಸೇರಿಕೊಂಡು ಅವು ವೃದ್ಧಿಯಾಗಿ ಬಹು ವೇಗದೊಡನೆ ಹೆಚ್ಚುತ್ತವೆ ; ಈ ವ್ಯಾಧಿಯಿಂದ ಒಂದು ಪಶುವು ಮರಣಹೊಂದಿ ಅದರ ರಕ್ತವು ಅಲ್ಲಿರುವ ಹಸಿರುಹುಲ್ಲಿನ ಮೇಲೆ ಸೇರಿಕೊಳ್ಳುವುದರಿಂದಲೂ ಅದರ ಕಳೇಬರವು ಅಲ್ಲಿಯೇ ಇದ್ದು, ಕಾಡುಮೃಗಗಳಿಂದಲೂ ಪಕ್ಷಿಗಳಿಂದಲೂ ಖಂಡಗೊಳಿಸಲ್ಪಡುವುದರಿಂದಲೂ, ರಕ್ತದಲ್ಲಿರುವ ಸಣ್ಣ ಕ್ರಿಮಿಗಳು ಪ್ರದೇಶದಲ್ಲೆಲ್ಲಾ ವ್ಯಾಪಿಸಿ ಈ ವ್ಯಾಧಿಯು ಅಲ್ಲಿ ವೃದ್ಧಿಯಾಗುವ ಸಂಭವನವೂ ಇದೆ. ಹಾಗಾದರೆ ಒಂದು ವರ್ಷದ ಶರುವಾಯು ಕೂಡ ಅಲ್ಲಿ ಬೆಳೆಯುವ ಹುಲ್ಲನ್ನು ಯಾವ ಜಂತುವಾದರೂ ತಿಂದಲ್ಲಿ ಆ ಜಂತುವಿಗೆ ತಪ್ಪದೆ ಈ ವ್ಯಾಧಿಯು ಸೋಕುತ್ತದೆ.

ಕೆಲವರು ತೊಗಲಿನ ವ್ಯಾಪಾರ ನಡಿಸುವವರು ಈ ವ್ಯಾಧಿಯುಳ್ಳ ಪಶುವಿನ ಸಗಣಿಯನ್ನು ಶೇಖರಿಸಿಟ್ಟಿದ್ದು, ತೊಗಲಿನ ಬೆಲೆಯು ಹೆಚ್ಚಾಗಿರುವಾಗ ಆ ಸಗಣಿಯನ್ನು ಬೈಲುಪ್ರದೇಶಗಳಲ್ಲಿಯ ಹುಲ್ಲಿನ ಮೇಲೆ ಸುರಿಯುವರು : ಆ ಹುಲ್ಲನ್ನು ತಿನ್ನುವ ಪಶುಗಳು ಸಕ್ತುಹೋಗುವುವು. ಇನ್ನು, ನರಿ ಹದ್ದು ಮೊದಲಾದ ಪ್ರಾಣಿಗಳೂ, ಇರುವೆಗಳೂ ಮೊದಲಾದವು ಕೂಡ ಈ ವ್ಯಾಧಿಯ ವ್ಯಾಪನೆಗೆ ಮೂಲ ಕಾರಣಗಳಾಗಿ ಪರಿಣಮಿಸುತ್ತವೆ. (ಸಶೇಷ)

ವುಡ್‌ಲ್ಯಾಂಡ್ಸ್ ಜನಭರಿತ 3 ನೇ ವಾರ

.... ಸಹಸ್ರಗಟ್ಟಿ ಜನರು ನೋಡಿ ಆನಂದಿಸುತ್ತಿರುವ ಅಪೂರ್ವ ಚಿತ್ರರತ್ನ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಒಪೆರಾ — 23-2-62 ರಿಂದ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ಲೀಲಾವತಿ, ಕಾಂತಾರಾವ್

[ದಿನವಹಿ 3 ಆಟಗಳು]

SHAKTI SUDHA

A Superb Tonic

ಗೋರಕ್ಷಣ ಪ್ರಾಣಿಪಯೂ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅಶೋಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing
L. N. Press
Sivarampet, Mysore

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.